ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 28–08–2017

## ಪತ್ರಿಕಾ ಆಮಂತ್ರಣ

1. ಸ್ವಚ್ಛ ಭಾರತ್ ಮಿಷನ್ ಪರಿಣಾಮಕಾರಿ ಅನುಷ್ಠಾನ ಮತ್ತು ಫೀಕಲ್ ಸ್ಲಡ್ಜ್ ಮ್ಯಾನೇಜ್‌ಮೆಂಟ್ ಬಗ್ಗೆ ಕಾರ್ಯಾಗಾರ.

ಉದ್ಘಾಟನೆ:

ಈಶ್ವರ್ ಖಂಡ್ರೆ, ಪೌರಾಡಳಿತ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ದಿನಾಂಕ: 29–08–2017, ಮಂಗಳವಾರ, ಸಮಯ: ಬೆಳಿಗ್ಗೆ 10.00 ಗಂಟೆಗೆ.

ಸ್ಥಳ: ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು

ಸಂಖ್ಯೆ : 98/98

## ಪತ್ರಿಕಾ ಪ್ರಕಟಣೆ

## ನವೆಂಬರ್ 1 ರಿಂದ *ಚಿಕಿತ್ಸೆ ಮೊದಲು ಪಾವತಿ ನಂತರ* ಎಂಬ ಧ್ಯೇಯ ವಾಕ್ಯ ಹೊತ್ತ ಸರ್ವರಿಗೂ ಆರೋಗ್ಯ ರಕ್ಷಣೆ ಒದಗಿಸುವ ಆರೋಗ್ಯ ಭಾಗ್ಯ ಯೋಜನೆ ಜಾರಿಗೆ

ಬೆಂಗಳೂರು, ಆಗಸ್ಟ್ 28 ( ಕರ್ನಾಟಕ ವಾರ್ತೆ) :

ರಾಜ್ಯದ ಒಂದು ಕೋಟಿ ನಲವತ್ತು ಲಕ್ಷ ಕುಟುಂಬಗಳಿಗೆ ಸರ್ಕಾರಿ ಮತ್ತು ಆಯ್ದ ಖಾಸಗಿ ಆಸ್ಪತ್ರೆಗಳಲ್ಲಿ *ಚಿಕಿತ್ಸೆ ಮೊದಲು ಪಾವತಿ ನಂತರ* ಎಂಬ ಧ್ಯೇಯ ವಾಕ್ಯ ಹೊತ್ತ ಸರ್ವರಿಗೂ ಆರೋಗ್ಯ ರಕ್ಷಣೆ ಒದಗಿಸುವ ಆರೋಗ್ಯ ಭಾಗ್ಯ ಯೋಜನೆಯನ್ನು ನವಂಬರ್ 1 ರಿಂದ ಜಾರಿಗೆ ತರಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ. ಬಿ. ಜಯಚಂದ್ರ ಅವರು ಸುದ್ದಿ ಗೋಷ್ಠಿಯಲ್ಲಿ ವಿವರ ನೀಡಿದರು.

ರಾಜ್ಯದ 1.40 ಕೋಟಿ ಕುಟುಂಬಗಳು ಆರೋಗ್ಯ ಕಾರ್ಡ್‌ಗೆ ಆಧಾರ್ ಯೋಜನೆಯನ್ನು ಜೋಡಣೆ ಮಾಡಿದ ನಂತರ ಸರ್ಕಾರಿ ಮತ್ತು ಆಯ್ದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗುತ್ತಾರೆ. ಈ ಯೋಜನೆಯ ಸಾಧಕ ಬಾಧಕಗಳ ಬಗ್ಗೆ ವಿವಿಧ ಇಲಾಖೆ ಮತ್ತು ಹಣಕಾಸು ಸಚಿವಾಲಯದ ಜೊತೆಗೆ ಸಮಾಲೋಚನೆ ನಡೆಸಿ ಅಂತಿಮ ಅಧಿಸೂಚನೆಯನ್ನು ಆರೋಗ್ಯ ಇಲಾಖೆ ಸಧ್ಯದಲ್ಲಿಯೇ ಪ್ರಕಟಿಸಲಿದೆ ಎಂದರು.

ರೈತ ಕುಟುಂಬದವರು, ಶಿಕ್ಷಕರು, ಅನುದಾನಿತ ಶಾಲೆಯ ಶಿಕ್ಷಕರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಬಿಸಿ ಊಟ ಕಾರ್ಯಕ್ರಮದ ಕಾರ್ಯಕರ್ತೆಯರು, ಇತರ ವರ್ಗದವರು, ಅಸಂಘಟಿತ ಕಾರ್ಮಿಕರು, ಆಟೋ ಚಾಲಕರು, ಕೂಲಿಗಳು, ಗಣಿ ಕಾರ್ಮಿಕರು, ಕಸ ಸಂಗ್ರಹಣಾಕಾರರು, ನಿರ್ಮಾಣ ಕಾರ್ಮಿಕರು, ನೇಕಾರರು, ಪೌರ ಕಾರ್ಮಿಕರು, ನರೇಗಾ ಯೋಜನೆಯ ಕಾರ್ಮಿಕರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಪ್ರಾಣಿಯ ದಾಳಿಗೆ ಬಲಿಯಾದವರು, ಮಾಧ್ಯಮದವರು, ಸಹಕಾರ ಸಂಘ–ಸಂಸ್ಥೆಗಳ ಸದಸ್ಯರು, ಸರ್ಕಾರಿ ನೌಕರರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ಈ ಯೋಜನೆಯ ವ್ಯಾಪ್ತಿಗೆ ಒಳಪಡದ ಇತರೆ ವರ್ಗದ ಮೂವತ್ತು ಲಕ್ಷ ಕುಟುಂಬದವರೂ ಕೂಡಾ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಲ್ಲಿ ತಲಾ 300 ರೂ ಹಾಗೂ ನಗರ ಪ್ರದೇಶದಲ್ಲಿ 700 ರೂ. ನಂತೆ ವಾರ್ಷಿಕ ವಿಮಾ ಕಂತು ಪಾವತಿಸಿ ಈ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ.

ನವೆಂಬರ್ 1 ರ ನಂತರ ಆರೋಗ್ಯ ಯೋಜನೆಯ ಹೆಸರಿನಲ್ಲಿರುವ ಏಳು ಯೋಜನೆಗಳು ವಿಲೀನವಾಗಲಿದೆ. ರಾಜ್ಯ ಸರ್ಕಾರ ವಾರ್ಷಿಕವಾಗಿ 869.4 ಕೋಟಿ ರೂ. ಮೊತ್ತವನ್ನು ಈ ಯೋಜನೆಗೆ ವೆಚ್ಚ ಮಾಡಲಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಪಡೆಯುವ ಮೊದಲು ಆಯ್ದ ಖಾಸಗೀ ಆಸ್ಪತ್ರೆಗಳಲ್ಲಿ 48 ಗಂಟೆಗಳ ಚಿಕಿತ್ಸೆ ಪಡೆದ ನಂತರ ಸರ್ಕಾರಿ ಆಸ್ಪತ್ರೆಗೆ ವರ್ಗಾವಣೆ ಮಾಡಬಹುದು. ಯಾವುದೇ ರೋಗಿಗೆ ಮೊದಲು ಚಿಕಿತ್ಸೆ ನಂತರ ಹಣ ಪಾವತಿ ಎಂಬ ಧ್ಯೇಯ ಹೊತ್ತ ಕಾರ್ಯಕ್ರಮ ಇದಾಗಿದೆ.

ಮೈಸೂರಿನ ಕೆ ಆರ್ ಆಸ್ಪತ್ರೆ ಆವರಣದಲ್ಲಿ ಕಟ್ಟಡಕ್ಕೆ 123.77 ಕೋಟಿ ರೂ. ಪೀಠೋಪಕರಣ ಮತ್ತು ಉಪಕರಣಗಳಿಗೆ 32.25 ಕೋಟಿ ರೂ, ಬೆಳಗಾವಿಯಲ್ಲಿ ಬೆಳಗಾವಿಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಕಟ್ಟಡಕ್ಕೆ 140 ಕೋಟಿ ರೂ, ಪೀಠೋಪಕರಣ ಮತ್ತು ಉಪಕರಣಗಳಿಗೆ 54.27 ಕೋಟಿ ರೂ ವೆಚ್ಚದಲ್ಲಿ ಹಾಗೂ ಕಲಬುರಗಿಯ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ಕಟ್ಟಡಕ್ಕೆ 107.06 ಕೋಟಿ ರೂ. ಮತ್ತು ಪೀಠೋಪಕರಣ ಮತ್ತು ಉಪಕರಣಗಳಿಗೆ 41.26 ಕೋಟಿ ರೂ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಸಂಪುಟ ಆಡಳಿತಾತ್ಮಕ ಒಪ್ಪಿಗೆ ನೀಡಿದೆ.

## ಇತರೆ ವಿಷಯಗಳ ಕುರಿತು:

ಬಡ್ತಿ ಮೀಸಲಾತಿ ಕುರಿತಂತೆ ರಾಜ್ಯಪಾಲರು ಕೆಲವು ಅಂಶಗಳ ಕುರಿತು ವಿವರಣೆ ಕೇಳಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿದೆ. ನಾಳೆ ಖುದ್ದಾಗಿ ತಾವು ರಾಜ್ಯಪಾಲರನ್ನು ಭೇಟಿ ಮಾಡಿ ಮತ್ತಷ್ಟು ವಿವರಗಳನ್ನು ಒದಗಿಸಿ ಸುಗ್ರಿವಾಜ್ಞೆಗೆ ಒಪ್ಪಿಗೆ ನೀಡಬೇಕೆಂದು ಮನವಿ ಮಾಡುವುದಾಗಿ ಜಯಚಂದ್ರ ಅವರು ತಿಳಿಸಿದರು.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ತಿದ್ದುಪಡಿ ವಿಧೇಯಕ ಕುರಿತಂತೆ ರಾಜ್ಯದ ಅಡ್ವೋಕೇಟ್ ಜನರಲ್ ಪರಿಶೀಲನೆ ಮಾಡುತ್ತಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗದ

ನೂತನ ನಿಯಮದಂತೆ ಒಂದು : ಐದರ ಅನುಪಾತದಡಿ ಸಂದರ್ಶನಕ್ಕೆ ಕರೆಯಲು ತಿದ್ದುಪಡಿ ಮಾಡಿದ್ದು, ಆ ಮಸೂದೆಗೆ ಒಪ್ಪಿಗೆ ನೀಡಬೇಕೆಂದು ರಾಜ್ಯಪಾಲರಿಗೆ ವಿವರಣೆ ಸಲ್ಲಿಸಲಾಗಿದೆ ಎಂದರು.

ಆಯವ್ಯಯದಲ್ಲಿ ಪ್ರಕಟಿಸಿದಂತೆ 49 ಹೊಸ ತಾಲ್ಲೂಕುಗಳ ರಚನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಹೊಸ ತಾಲ್ಲೂಕುಗಳ ಗಡಿ ವಿಚಾರದ ಸಂಪೂರ್ಣ ವಿವರವನ್ನು ಜಿಲ್ಲಾಡಳಿತ ನೀಡಿದ ಬಳಿಕ ಅಧಿಕೃತ ಆದೇಶ ಹೊರ ಬೀಳಲಿದೆ ಎಂದು ಸಚಿವರು ಹೇಳಿದರು.

ಬೆಂಗಳೂರು ನಗರದ ಏಕೆ ಕಾಲೋನಿಯಲ್ಲಿರುವ ವಾಸವಾಗಿರುವ 7612 ಅನಧಿಕೃತ ನಿವಾಸಿಗಳ ನೀರಿನ ಬಾಕಿ ಹಾಗೂ ಅದರ ಬಡ್ಡಿ ಸೇರಿದಂತೆ ಸುಮಾರು 12.93 ಕೋಟಿ ರೂ. ಮನ್ನಾ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ ರಸಗೊಬ್ಬರ ಕಾಪು ದಾಸ್ತಾನು ಮಾಡಲು ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಯ ಬ್ಯಾಂಕುಗಳಿಂದ 500 ಕೋಟಿ ರೂ. ಬಂಡವಾಳ ಸಾಲಕ್ಕೆ ರಾಜ್ಯ ಸರ್ಕಾರ ಖಾತ್ರಿ ನೀಡಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಮತ್ತು ಆಶ್ರಯ ಶಾಲೆಗಳ ವಿದ್ಯಾರ್ಥಿಗಳಿಗೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯಿಂದ 6.50 ಕೋಟಿ ರೂ ವೆಚ್ಚದಲ್ಲಿ ಕಿಟ್‌ಗಳನ್ನು ನೀಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಬೆಂಗಳೂರು–ನೆಲಮಂಗಲ ರಾಷ್ಟ್ರೀಯ ಹೆದ್ದಾರಿ 48 ರ ಬೆಂಗಳೂರು ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಹಾದು ಹೋಗುವ ಸ್ಥಳದಲ್ಲಿ 165 ಕೋಟಿ ರೂ. ವೆಚ್ಚದಲ್ಲಿ ಕೆಳ ಸೇತುವೆ ನಿರ್ಮಾಣ ಮಾಡಲು ಸಂಪುಟ ಸಮ್ಮತಿಸಿದೆ.

ರಾಯಚೂರು ಜಿಲ್ಲಾ ಕಚೇರಿಗಳ ಸಂಕೀರ್ಣ ಕಟ್ಟಡ ಕಾಮಗಾರಿ ನಿರ್ಮಾಣ ಮಾಡಲು 25 ಕೋಟಿ ರೂ. ಅಂದಾಜು ಪಟ್ಟಿಗೆ ಸಂಪುಟ ಒಪ್ಪಿಗೆ ನೀಡಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸುಬೇದಾರ್ ಛತ್ರಂ ರಸ್ತೆ, ಗುಬ್ಬಿ ವೀರಣ್ಣ ರಸ್ತೆ, ಧನ್ವಂತರಿ ರಸ್ತೆ, ಕೃಷ್ಣ ರಾಜೇಂದ್ರ ಮಾರುಕಟ್ಟೆ ಸೇರಿದಂತೆ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ 105 ಕೋಟಿ ರೂ. ಅಂದಾಜು ವೆಚ್ಚಕ್ಕೆ ಸಂಪುಟ ಅನುಮೋದನೆ ನೀಡಿದೆ. ಅದೇ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ಯಾಕೇಜ್ ಒಂದರಡಿ 292 ಕೋಟಿ ರೂ. ವೆಚ್ಚದಲ್ಲಿ ವೈಟ್ ಟ್ಯಾಪಿಂಗ್ ಮಾಡಲು ಸಂಪುಟ ಸಮ್ಮತಿಸಿದೆ.

ದಾವಣಗೆರೆ ಮತ್ತು ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಿರುವ ಸರ್ ಮಿರ್ಜಾ ಇಸ್ಮಾಯಿಲ್ ನಗರ ಬಡಾವಣೆಯಲ್ಲಿನ ದರ ನಿಗಧಿಗೆ ಸಂಪುಟ ಅನುಮತಿ ನೀಡಿದೆ.

ಗಜೇಂದ್ರಗಡ್–ನರೇಗಲ್ ಮತ್ತು ರೋಣ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ಹಾಲಿ ಗುತ್ತಿಗೆದಾರ ಮೆಗಾ ಇಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯಿಂದ 60.45 ಕೋಟಿ ರೂ. ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಕೃಷ್ಣಾಭಾಗ್ಯ ಜಲ ನಿಗಮಕ್ಕೆ ಐ ಐ ಬಿ ಆರ್ ವತಿಯಿಂದ 1500 ಕೋಟಿ ರೂ. ಹಣವನ್ನು ಸಾಲ ಮೂಲಕ ಸಂಗ್ರಹಿಸಲು ಸಂಪುಟ ಅನುಮತಿ ನೀಡಿದೆ.

ಕೊಳ್ಳಗಾಲ ತಾಲ್ಲೂಕಿನ ಸರ್ ಕಾಟನ್ ಕಾಲುವೆ, ಹಂಪಾಪುರ ಕಾಲುವೆ ಮತ್ತು ಗುಪ್ಪಮ್ಮ ಕಾಲುವೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಅಂದಾಜು 20.30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಒಪ್ಪಿಗೆ ನೀಡಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನಲ್ಲಿ ಘಟಪ್ರಭಾ ನದಿಯ ಎಡಬದಿಯಿಂದ ಎಳ್ಳಿಗುತ್ತಿ ಗ್ರಾಮದ ಹತ್ತಿರ 35 ಕೋಟಿ ರೂ. ವೆಚ್ಚದಲ್ಲಿ 0.093 ಟಿ. ಎಂ.ಸಿ ಯಷ್ಟು ನೀರನ್ನು ಏತ ನೀರಾವರಿ ಮೂಲಕ ಯೋಜನೆ ಕೈಗೆತ್ತಿಕೊಳ್ಳಲು ಸಂಪುಟ ಆಡಳಿತಾತ್ಮಕ ಒಪ್ಪಿಗೆ ನೀಡಿದೆ.

ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣ ತಾಲ್ಲೂಕಿನ ಅಮಾನಿ ಕೆರೆಯಿಂದ ಏತ ನೀರಾವರಿ ಮೂಲಕ ನೀರನ್ನು ಎತ್ತಿ 25 ಕೆರೆಗಳಿಗೆ 70 ಕೋಟಿ ರೂ. ವೆಚ್ಚದಲ್ಲಿ ನೀರು ತುಂಬಿಸಲು ಸಂಪುಟ ಅನುಮೋದನೆ ನೀಡಿದೆ.

ಮುಲ್ಲಾಮಾರಿ ಯೋಜನೆಯ ಬಲದಂಡೆ ಕಾಲುವೆಯ ಹಾಗೂ ಕಾಲುವೆ ಜಾಲ 117 ಕೋಟಿ ರೂ. ವೆಚ್ಚದಲ್ಲಿ ಆಧುನೀಕರಣ ಮಾಡಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಹಾರಂಗಿ ಎಡದಂಡೆ ನಾಲೆಯ ಸರಪಳಿ 27,083–35,905 ಕಿ. ಮೀ ವರೆಗೆ 116 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಹಾಗೂ ಸರಪಳಿ 85,905–149.385 ಕಿ. ಮೀ ವರೆಗೆ 62.15 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮೆಕಾನಿಕಲ್ ವೇಪರ್ ಬಳಸಿ ಸಿ ಸಿ ಲೈನಿಂಗ್ ಮತ್ತು ಅಡ್ಡ ಮೋರಿ ಅಭಿವೃದ್ಧಿಗೆ ಸಂಪುಟ ಒಪ್ಪಿಗೆ ನೀಡಿದೆ.

ನಾರಾಯಪುರ ಜಲಾಶಯದ ಹಿನ್ನೀರಿನಿಂದ ಮುದ್ದೇಬಿಹಾಳ ತಾಲ್ಲೂಕಿನ ಬಂಗಾರುಗುಂಡ ಗ್ರಾಮದ ಹತ್ತಿರ ನೀರನ್ನು ಎತ್ತಿ ಮುದ್ದೇಬಿಹಾಳ ತಾಲ್ಲೂಕಿನ 3200 ಹೆಕ್ಟೇರ್ ಪ್ರದೇಶಕ್ಕೆ 170 ಕೋಟಿ ರೂ. ವೆಚ್ಚದಲ್ಲಿ ನಾಗರಬೆಟ್ಟ ಏತ ನೀರಾವರಿ ಯೋಜನೆ ನಿರ್ಮಿಸಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಆಲಮಟ್ಟಿ ಎಡದಂಡೆ ಕಾಲುವೆಯ ಸರಪಳಿ 0.00–68.24 ಕಿ. ಮೀ ವರೆಗಿನ ಹಾಳಾಗಿರುವ ಆಯ್ದ ಭಾಗಗಳ ಹಾಗೂ ವಿತರಣಾ ಕಾಲುವೆಗಳನ್ನು 112.46 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

ಮೈಸೂರು ಜಿಲ್ಲೆಯ ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಸರಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬಿಡಗಲ್ಲು ಗ್ರಾಮದಲ್ಲಿರುವ ಕಾವೇರಿ ನೀರಾವರಿ ನಿಗಮಕ್ಕೆ ಸೇರಿದ ನಾಲ್ಕು ಎಕರೆ ಪ್ರದೇಶವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣ ಮಾಡಲು ಶಿಕ್ಷಣ ಇಲಾಖೆಗೆ ಉಚಿತವಾಗಿ ಭೂಮಿ ಹಸ್ತಾಂತರಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಮಹಾರಾಷ್ಟ್ರ ಮಾದರಿಯಲ್ಲಿಯೇ ಅಂತರ್ಜಲ ಅಭಿವೃದ್ಧಿ ಪಡಿಸುವ ವಿಶೇಷ ಯೋಜನೆಯನ್ನು 20.59 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಜಯಚಂದ್ರ ಅವರು ಮಾಹಿತಿ ನೀಡಿದರು.

***************

ಡಿ ಪಿ ಎಂ : ಕೆ ಪಿ ಪಿ

ಸಂಖ್ಯೆ : 99/99

# 2017–18 ನೇ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನೊಂದಾಯಿತ ಪತ್ರಕರ್ತರಿಗೆ ಮೀಡಿಯಾ ಕಿಟ್‌ಗೆ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 28 (ಕರ್ನಾಟಕ ವಾರ್ತೆ)

ಪತ್ರಿಕೋದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಪತ್ರಕರ್ತರನ್ನು ಪ್ರೋತ್ಸಾಹಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಮಾಧ್ಯಮ ಮಾನ್ಯತೆ ಹೊಂದಿರುವ ಪತ್ರಕರ್ತರಿಗೆ ಮೀಡಿಯಾ ಕಿಟ್ ವಿತರಿಸುವ ಯೋಜನೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಾನ್ಯತೆ ಪಡೆದ ಪತ್ರಕರ್ತರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ವಿಭಾಗದಿಂದ ಅರ್ಜಿ ನಮೂನೆಯನ್ನು ಪಡೆಯಬಹುದು ಇಲ್ಲವೇ ಇಲಾಖೆಯ ವೆಬ್‌ಸೈಟ್ **"karnatakainformation.gov.in"** ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ನೋಂದಾಯಿತ ಪತ್ರಕರ್ತರ ಹೆಸರು, ಜನ್ಮ ದಿನಾಂಕ, ಖಾಯಂ ವಿಳಾಸ, ವಿದ್ಯಾರ್ಹತೆ, ಜಾತಿ (ಉಪ ಜಾತಿ), ಪತ್ರಿಕಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನುಭವ, ವೇತನ ವಿವರಗಳನ್ನೊಳಗೊಂಡ ಮಾಹಿತಿಯನ್ನು ಭರ್ತಿಮಾಡಿ ಸ್ವ-ವಿಳಾಸವಿರುವ ಲಕೋಟೆಯೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿಯೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವ ಮಾಧ್ಯಮ ಸಂಸ್ಥೆಯ ವಿವರ, ಪ್ರಸಾರ ಸಂಖ್ಯೆ, ಪತ್ರಿಕೆಯ ಮಾಧ್ಯಮ ಪಟ್ಟಿಯ ವಿವರ, ಜಾತಿ ಪ್ರಮಾಣ ಪತ್ರ, ವಿಳಾಸ ಹಾಗೂ ವಯಸ್ಸನ್ನು ದೃಢೀಕರಿಸುವ ದಾಖಲೆಗಳ ಪ್ರತಿಯನ್ನು ಲಗತ್ತಿಸಿ ದಿನಾಂಕ: 27–09–2017 ರ ಸಂಜೆ 5.00 ಗಂಟೆಯೊಳಗೆ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, # ನಂ 17, "ವಾರ್ತಾಸೌಧ", ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001 ಇವರಿಗೆ ಸಲ್ಲಿಸಬೇಕು.

ಲಕೋಟೆಯ ಮೇಲ್ಭಾಗದಲ್ಲಿ "ನೋಂದಾಯಿತ ಪತ್ರಕರ್ತರಿಗೆ ಮೀಡಿಯಾ ಕಿಟ್‌ಗಾಗಿ ಅರ್ಜಿ" ಎಂದು ನಮೂದಿಸಿರಬೇಕು. ಹೆಚ್ಚಿನ ಮಾಹಿತಿಗಾಗಿ ಸುದ್ದಿ ಮತ್ತು ಪತ್ರಿಕಾ ವಿಭಾಗದ ಉಪ ನಿರ್ದೇಶಕರು, ಇವರನ್ನು ದೂರವಾಣಿ ಸಂಖ್ಯೆ 080 – 22028037/87 ರ ಮೂಲಕ ಸಂಪರ್ಕಿಸಬಹುದು.

ಜಿಡಿ:ಜಿಪಿಆರ್

ಸಂಖ್ಯೆ : 100/100

# ವಿಜ್ಞಾನಿ ಅರ್ನೆಸ್ಟ್ ರುದರ್‌ಪೋರ್ಡ್‌ರವರ ಜನ್ಮ ದಿನಾಚರಣೆ

ಬೆಂಗಳೂರು, ಆಗಸ್ಟ್ 28 (ಕರ್ನಾಟಕ ವಾರ್ತೆ)

ಜವಾಹರ್‌ಲಾಲ್ ನೆಹರು ತಾರಾಲಯವು ಶಾಲಾ ಶಿಕ್ಷಕರಾಗಿ "ತಿಂಗಳ ಸಂಭ್ರಮ" ಎಂಬ ಹೊಸ ಕಾರ್ಯಕ್ರಮವನ್ನು ಪರಿಚಯಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಆಯ ತಿಂಗಳಿನಲ್ಲಿ ಹುಟ್ಟಿದ ವಿಜ್ಞಾನಿಗಳ ಜನ್ಮದಿನಾಚರಣೆ ಇಲ್ಲವೇ ಜರುಗಿದ ವೈಜ್ಞಾನಿಕ ವಿಶೇಷತೆಯುಳ್ಳ ಘಟನೆಗಳನ್ನು ಆಚರಿಸುವ ಉದ್ದೇಶವಾಗಿದೆ.

ಈ ತಿಂಗಳ 30 ರಂದು ವಿಜ್ಞಾನಿ ಅರ್ನೆಸ್ಟ್ ರುದರ್‌ಫೋರ್ಡ್ ರವರ ಜನ್ಮ ದಿನ ಆಚರಿಸುತ್ತಿದ್ದು, ಬೈಜಿಕ ಭೌತವಿಜ್ಞಾನದಲ್ಲಿ ಅರ್ನೆಸ್ಟ್ ರುದರ್‌ಫೋರ್ಡ್‌ರವರ ಕೊಡುಗೆಗಳ ಬಗ್ಗೆ ಪ್ರಯೋಗಗಳ ಮೂಲಕ ಚರ್ಚಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ.

ಈ ತಿಂಗಳ 30 ರಂದು ಬೆಳಿಗ್ಗೆ 10.30 ರಿಂದ 12.30 ಗಂಟೆವರೆಗೆ ನಗರದ ಶ್ರೀ ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು ಇಲ್ಲಿ ಜನ್ಮ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ವಿಜ್ಞಾನ ವಿಷಯದ 40 ಶಿಕ್ಷಕರಿಗೆ ಅವಕಾಶವಿದೆ.

ಆಸಕ್ತರು ವೆಬ್‌ಸೈಟ್ infor@taralaya.org. ಮೂಲಕ ವೀಕ್ಷಿಸಬಹುದಾಗಿದೆ. ಆಗಸ್ಟ್ 29 ರೊಳಗೆ ನೋಂದಾಯಿಸಿಕೊಳ್ಳುವವರು ಮಾತ್ರ ಪಾಲ್ಗೊಳ್ಳಬಹುದು. ಮೊದಲು ಬಂದವರಿಗೆ ಮೊದಲ ಆದ್ಯತೆ.

ಹೆಚ್ಚಿನ ವಿವರಗಳಿಗೆ ದೂರವಾಣಿ – 2237 9725/2226 6084 ಸಂಪರ್ಕಿಸಬಹುದಾಗಿದೆ. ಅಥವಾ http://www.taralaya.org/announcements.php ವೀಕ್ಷಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜಿಡಿ:ಜಿಪಿಆರ್

ಸಂಖ್ಯೆ : 101/101

# ಅನುಪಯುಕ್ತ ಔಷಧಿ ಮಾರಾಟ ಮಾಡಿದ ಮಾಲೀಕರಿಗೆ ಶಿಕ್ಷೆ ಹಾಗೂ ದಂಡ

ಬೆಂಗಳೂರು, ಆಗಸ್ಟ್ 28 (ಕರ್ನಾಟಕ ವಾರ್ತೆ)

ಔಷಧಿ ಅಂಗಡಿ ಮತ್ತು ಮಾಲೀಕರು ಹಾಗೂ ಪಾಲುದಾರರುಗಳ ಎಸಗಿರುವ ತಪ್ಪುಗಳು ನ್ಯಾಯಾಲಯದಲ್ಲಿ ಸಾಬೀತಾಗಿದ್ದು ರಾಜ್ಯದ ಹಲವು ಔಷಧಿ ಅಂಗಡಿಗಳಿಗೆ ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶ ಹೋರಡಿಸಿದೆ.

ವಿವಿಧ ಜಿಲ್ಲೆಗಳ ಔಷಧಿ ಅಂಗಡಿಗಳು, ಮಾಲೀಕರು ಮತ್ತು ಪಾಲುದಾರರ ಮೇಲೆ ಹಲವು ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲು ಏರಿದ್ದವು. ಅದರಂತೆ ಇತ್ತೀಚೆಗೆ ವಿವಿಧ ಹಂತದ ನ್ಯಾಯಾಲಯಗಳು ತಮ್ಮ ತೀರ್ಪನ್ನು ಪ್ರಕಟಿಸಿವೆ ಎಂದು ಔಷಧ ನಿಯಂತ್ರಣ ಇಲಾಖೆ ತಿಳಿಸಿದೆ.

ವೈದ್ಯರ ಸಲಹಾ ಚೀಟಿ ಇಲ್ಲದೆ ಔಷಧ ಮತ್ತು ಕಾಂತಿವರ್ಧಕವನ್ನು ಮಾರಾಟ ಮಾಡಿದ್ದಕ್ಕಾಗಿ ಜೆ.ಎಂ.ಎಫ್.ಸಿ. ನ್ಯಾಯಾಲವು ಕಲಬುರಗಿಯ ಉಮಾ ಮೆಡಿಕಲ್ಸ್ ಅಂಡ್ ಜನರಲ್ ಸ್ಟೋರ್ಸ್ ಮಾಲೀಕರಾದ ವಿಶ್ವನಾಥ್ ಅವರಿಗೆ 20,000 ರೂ. ಗಳ ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅರ್ಹತಾ ವ್ಯಕ್ತಿಯ ಗೈರುಹಾಜರಿಯಲ್ಲಿ ಔಷಧ ಮತ್ತು ಕಾಂತಿವರ್ಧಕಗಳನ್ನು ಮಾರಾಟ ಮಾಡಿದ್ದಕ್ಕಾಗಿ ಸಾಗರದ ರಾಘವೇಂದ್ರ ಮೆಡಿಕಲ್ ಅಂಡ್ ಜನರಲ್ ಸ್ಟೋರ್ಸ್‍ನ ಮಾಲೀಕರಾದ ರಾಘವೇಂದ್ರ ಸಿ. ಅವರಿಗೆ ಜೆ.ಎಂ.ಎಫ್.ಸಿ. ನ್ಯಾಯಾಲವು ರೂ 5,000 ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅಧಿಕೃತ ಔಷಧ ಪರವಾನಗಿ ಹೊಂದದೆ ಸಂಸ್ಥೆಯಲ್ಲಿ ಔಷಧ ದಾಸ್ತಾನು ಮಾರಾಟ ಮಾಡಿದ್ದು, ಔಷಧ ಮತ್ತು ಕಾಂತಿವರ್ಧಕವನ್ನು ಮಾರಾಟ ಮಾಡಿದ್ದಕ್ಕಾಗಿ ಜೆ.ಎಂ.ಎಫ್.ಸಿ. ನ್ಯಾಯಾಲವು ನಿಪ್ಪಾಣಿಯ ಲಕ್ಷ್ಮೀ ಮೆಡಿಕಲ್ ಸ್ಟೋರ್ಸ್‍ನ ಮಾಲೀಕರಾದ ರಮೇಶ್ ಕಲಿಗೌಡ ಪಾಟೀಲ್ ಅವರಿಗೆ ರೂ 6,000 ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅಧಿಕೃತ ಔಷಧ ಪರವಾನಗಿ ಹೊಂದದೆ ಸಂಸ್ಥೆಯಲ್ಲಿ ಔಷಧ ದಾಸ್ತಾನು ಮಾರಾಟ ಮಾಡಿದ್ದು, ಔಷಧ ಮತ್ತು ಕಾಂತಿವರ್ಧಕವನ್ನು ಮಾರಾಟ ಮಾಡಿದ್ದಕ್ಕಾಗಿ ಜೆ.ಎಂ.ಎಫ್.ಸಿ. ನ್ಯಾಯಾಲವು ಬೆಂಗಳೂರಿನ ಬನಶಂಕರಿ ಮೆಡಿಕಲ್ಸ್, ಗೌಡನಪಾಳ್ಯ, ಸಪ್ತಗಿರಿ ಫಾರ್ಮ ಡಿಸ್ಟ್ರಿಬ್ಯೂಟರ್, ಚಾಮರಾಜಪೇಟೆ, ಶ್ರೀನಿವಾಸ ಮೆಡಿಕಲ್ಸ್ ಪ್ರೈ. ಲಿಮಿಟೆಡ್, ಕೆ.ಹೆಚ್. ಸರ್ಕಲ್, ಮೇದಾ ಫಾರ್ಮ ಏಜೆನ್ಸಿಸ್, ಬನಶಂಕರಿ, ಪ್ರಥಮ್ ಅಸೋಸೀಯೆಟ್ಸ್, ಭರತ್ ಮೆಡಿಕಲ್ಸ್ ಅಂಡ್ ಜನರಲ್ ಏಜೆನ್ಸಿ, ಬನಶಂಕರಿ 2ನೇ ಹಂತ, ರಾಜೇಶ್ ಫಾರ್ಮ, ಬನಶಂಕರಿ 2ನೇ ಹಂತ, ನವಜೀವನ ಏಜೆನ್ಸಿ, ತುಲಸಿ ಮೆಡಿಕಲ್ಸ್ ಅಂಡ್ ಜನರಲ್ ಸ್ಟೋರ್ಸ್, ಮಾರತ್‌ಹಳ್ಳಿ, ಮಾತೇಶ್ವರಿ ಡ್ರಗ್ ಹೌಸ್, ಕಾಟನ್‌ಪೇಟೆ, ತುಲಸಿ ಕಾರ್ಪೋರೇಶನ್ ಬಿ.ವಿ.ಕೆ. ಅಯ್ಯಂಗಾರ ರಸ್ತೆ, ಪದ್ಮಾವತಿ ಫಾರ್ಮಸ್ಯೂಟಿಕಲ್ಸ್, ಎ.ಎಸ್. ಚಾರ್‌ಸ್ಟ್ರೀಟ್, ಚಾರ್‌ಬುಜ ಫಾರ್ಮ, ಅಕ್ಕಿಪೇಟೆ, ವಿಮಲ ಡಿಸ್ಟ್ರಿಬ್ಯೂಟರ್, ಎ.ಎಸ್. ಚಾರ್‌ಸ್ಟ್ರೀಟ್, ವಿಮಲ ಫಾರ್ಮ ಇಂಟರ್‌ನ್ಯಾಷನಲ್, ಚಾಮರಾಜಪೇಟೆ, ಇವುಗಳ ಮಾಲೀಕರಿಗೆ ಮತ್ತು ಡಿಸ್ಟ್ರಿಬ್ಯೂಟರ್‌ಗಳಿಗೆ ಅನುಕ್ರಮವಾಗಿ ರೂ 1,20,000 ಹಾಗೂ ರೂ 20,000 ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅನುತ್ತಮ ಗುಣಮಟ್ಟದ ಔಷಧಿಗಳನ್ನು ಮತ್ತು ಕಾಂತಿವರ್ಧಕಗಳನ್ನು ತಯಾರಿಸಿ ಮಾರಾಟ ಮಾಡಿದ್ದಕ್ಕಾಗಿ ಬೆಂಗಳೂರಿನ ಪಿಲ್ಕೋ ಫಾರ್ಮ ಪ್ರೈ. ಲಿಮಿಟೆಡ್‌ನ ಇಬ್ಬರು ಮಾಲೀಕರಿಗೆ ವಿಶೇಷ ಆರ್ಥಿಕ ಅಪರಾಧಗಳ ನ್ಯಾಯಾಲಯದಿಂದ ತಲಾ ರೂ. 5,000 ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅನುತ್ತಮ ಗುಣಮಟ್ಟದ ಔಷಧಿಗಳನ್ನು ಮತ್ತು ಕಾಂತಿವರ್ಧಕಗಳನ್ನು ತಯಾರಿಸಿ ಮಾರಾಟ ಮಾಡಿದ್ದಕ್ಕಾಗಿ ಪ್ರಥಮ ದರ್ಜೆಯ ದಂಡಾಧಿಕಾರಿಗಳ 2ನೇ ನ್ಯಾಯಲವು ಧಾರವಾಡದ ಗ್ಲ್ಯಾಸಿಸ್ ಫಾರ್ಮಸ್ಯೂಟಿಕಲ್ ಪ್ರೈ. ಲಿಮಿಟೆಡ್‌ನ ಆರೋಪಿಗಳಾದ ರಮೇಶ್ ಕುರಾನಾ, ರೋಹಿಣಿ ಹಾಗೂ ರಾಜಕುಮಾರ್ ಪಾಸ್ವರ್ ಅವರಿಗೆ ತಲಾ ರೂ 20,000 ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅನುತ್ತಮ ಗುಣಮಟ್ಟದ ಔಷಧಿಗಳನ್ನು ಮತ್ತು ಕಾಂತಿವರ್ಧಕಗಳನ್ನು ತಯಾರಿಸಿ ಮಾರಾಟ ಮಾಡಿದ್ದಕ್ಕಾಗಿ ಜೆ.ಎಂ.ಎಫ್.ಸಿ. ನ್ಯಾಯಾಲವು ಕಾರವಾರದ ಎಂಡೋ ಲ್ಯಾಬ್ಸ್ ಲಿಮಿಟೆಡ್‌ನ ಮಾಲೀಕರಾದ ದೀರಜ್‌ಲುಲ್ಲಾ ಅವರಿಗೆ ತಲಾ ರೂ 20,000 ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅನುತ್ತಮ ಗುಣಮಟ್ಟದ ಔಷಧಿಗಳನ್ನು ಮತ್ತು ಕಾಂತಿವರ್ಧಕಗಳನ್ನು ತಯಾರಿಸಿ ಮಾರಾಟ ಮತ್ತು ವಿತರಣೆ ಮಾಡಿದ್ದಕ್ಕಾಗಿ ಜೆ.ಎಂ.ಎಫ್.ಸಿ. ನ್ಯಾಯಾಲಯ ಬಾಗಲಕೋಟೆಯ ಸೋಕ್ರಸ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್‌ನ ಮಾಲೀಕರಾದ ಏಳು ಜನ ಆರೋಪಿಗಳಿಗೆ ತಲಾ ರೂ 5,000 ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅನುತ್ತಮ ಗುಣಮಟ್ಟದ ಔಷಧಿಗಳನ್ನು ಮತ್ತು ಕಾಂತಿವರ್ಧಕಗಳನ್ನು ತಯಾರಿಸಿ ಮಾರಾಟ ಮತ್ತು ವಿತರಣೆ ಮಾಡಿದ್ದಕ್ಕಾಗಿ ಜೆ.ಎಂ.ಎಫ್.ಸಿ. ನ್ಯಾಯಾಲಯ ಮೈಸೂರಿನ ಪೂರ್ಣಿಮಾ ಫಾರ್ಮಸ್ಯೂಟಿಕಲ್ಸ್ ಪ್ರೈ. ಲಿಮಿಟೆಡ್‌ನ ಮಾಲೀಕರುಗಳಾದ ನಾಲ್ಕು ಆರೋಪಿಗಳಿಗೆ ತಲಾ 20,000 ರೂ ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ.

ಅನುತ್ತಮ ಗುಣಮಟ್ಟದ ಔಷಧಿಗಳನ್ನು ಮತ್ತು ಕಾಂತಿವರ್ಧಕಗಳನ್ನು ತಯಾರಿಸಿ ಮಾರಾಟ ಮತ್ತು ವಿತರಣೆ ಮಾಡಿದ್ದಕ್ಕಾಗಿ ಜೆ.ಎಂ.ಎಫ್.ಸಿ. ನ್ಯಾಯಾಲಯ ಚಿತ್ರದುರ್ಗದ ಶ್ರೀವಾರಿ ಮೆಡಿಕಲ್ಸ್‌ನ ಇಬ್ಬರು ಮಾಲೀಕರಿಗೆ ತಲಾ 5,000 ರೂ ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೂ ಜೈಲು ಶಿಕ್ಷೆಯನ್ನು ವಿಧಿಸಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಜಿಡಿ:ಜಿಪಿಆರ್

ಸಂಖ್ಯೆ : 102/102

# ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

**ಬೆಂಗಳೂರು, ಆಗಸ್ಟ್ 28 (ಕರ್ನಾಟಕ ವಾರ್ತೆ)**

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಮತ್ತು ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆಯಡಿ ಸಾಮಾಜಿಕ “ ಪರಿಣಾಮ ನಿರ್ಧಾರಣಾ ಅಧ್ಯಯನ” ವರದಿಯನ್ನು ಮೌಲ್ಯಮಾಪನ ಮಾಡಿ ಸಲಹೆ ಮತ್ತು ಶಿಫಾರಸ್ಸುಗಳನ್ನು ನೀಡುವ ತಂಡವು ಅಧಿಕಾರೇತರ ಸಾಮಾಜಿಕ, ವಿಜ್ಞಾನಿಗಳು ಹಾಗೂ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ವಿಷಯದಲ್ಲಿನ ಪರಿಣಿತ ವ್ಯಕ್ತಿಗಳ ಹೆಸರುಗಳ ಪಟ್ಟಿಯನ್ನು ತಯಾರಿಸಲು ಹಾಗೂ ಆಯಾ ವಿಷಯಗಳ ಬಗ್ಗೆ ಆಳವಾದ ಜ್ಞಾನ ಹೊಂದಿರುವ ಪ್ರತಿಭಾನ್ವಿತರುಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು.

**ಅರ್ಜಿಗಳು ಸ್ವೀಕೃತವಾಗದ ಹಿನ್ನೆಲೆಯಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ಸೆಪ್ಟೆಂಬರ್ 15, 2017 ರವರೆಗೆ ವಿಸ್ತರಿಸಲಾಗಿದೆ ರಾಜ್ಯ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಇಲಾಖೆಯ ಕಾರ್ಯದರ್ಶಿಯವರು ತಿಳಿಸಿದ್ದಾರೆ.**

**ಅರ್ಜಿ ಸಲ್ಲಿಸಲು ಇಚ್ಛಿಸುವವರು ಅಂಚೆ ಮೂಲಕ ಕಂದಾಯ ಇಲಾಖೆ, ಕೊಠಡಿ ಸಂಖ್ಯೆ 510, ಮೂರನೇ ಹಂತ, 5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ಅಥವಾ ಖುದ್ದಾಗಿ ಕಚೇರಿಗೆ ಸಲ್ಲಿಸಬಹುದಾಗಿದೆ.**

**ಜಿಡಿ:ಜಿಪಿಆರ್**

**ಛಾಯಾಚಿತ್ರ ಶೀರ್ಷಿಕೆ:**

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಲೋಕಾರ್ಪಣೆಯ ಕಾರ್ಯಕ್ರಮದ ಪೂರ್ವಭಾವಿ ಸಭೆ ಇಂದು ಜರುಗಿತು. ಈ ಸಂದರ್ಭದಲ್ಲಿ ನಿಗಮದ ಅಧ್ಯಕ್ಷ ಬಿ.ವಿ. ಸೀತಾರಾಂ, ಶಾಸಕ ಶಿವರಾಜ್ ತಂಗಡಗಿ, ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಸುರೇಶ್ ನಾಯ್ಕ್ ಚಿತ್ರದುರ್ಗದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸೇರಿದಂತೆ ನಿಗಮದ ಸದಸ್ಯರು ಮತ್ತು ಇತರೆ ಅಧಿಕಾರಿಗಳು ಭಾಗವಹಿಸಿದ್ದರು.**